# ಮೆಡಿಕ್ವಿಪ್‌ನಿಂದ ಹೊಸ ಉತ್ಪನ್ನ ಪರಿಚಯ

**ಬೆಂಗಳೂರು:** ಹೆಲ್ತ್‌ಕೇರ್ ಉತ್ಪನ್ನಗಳ ತಯಾರಿಕೆ ಮತ್ತು ಆಮದುದಾರ ಕಂಪೆನಿ ಮೆಡಿಕ್ವಿಪ್ ಹೆಲ್ತ್‌ಕೇರ್ ಸಲೂಶನ್ಸ್ ಆಕ್ಸಿಜನ್ ಕಾನ್ಸಂಟ್ರೇಟರ್‌ಗಳ ಶ್ರೇಣಿಯ ಜಾಲವನ್ನು ಮತ್ತಷ್ಟು ವಿಸ್ತರಣೆ ಮಾಡಿದೆ ಎಂದು ಸಂಸ್ಥೆಯ ಸಹ ಸಂಸ್ಥಾಪಕ ಸುಹಾಸ್ ಸುಧಾಕರನ್ ತಿಳಿಸಿದ್ದಾರೆ. ಸಿಒಪಿಡಿ ದೇಶಾದ್ಯಂತ ವ್ಯಾಪಕವಾಗಿದೆ. ಆಕ್ಸಿಜನ್ ಕಾನ್ಸಂಟ್ರೇಟರ್ ಗಳು ಚಿಕಿತ್ಸೆಗೆ ಅತ್ಯಂತ ಅಗತ್ಯವಾಗಿವೆ. ಈ ಆಕ್ಸಿಜನ್ ಅಗತ್ಯತೆಯಲ್ಲಿ ರೋಗಿಯಿಂದ ರೋಗಿಗೆ ವ್ಯತ್ಯಾಸವಿರುತ್ತದೆ. ರೋಗಿಯ ಸಮಸ್ಯೆಗಳಿಗೆ ಅನುಗುಣವಾಗಿ ಈ ಆಮ್ಲಜನಕದ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಂಸ್ಥೆಯು ಆಕ್ಸಿಜನ್ ಕಾನ್ಸಂಟ್ರೇಟರ್‌ಗಳ ಶ್ರೇಣಿಗೆ ಮತ್ತೆರಡು ರೂಪಾಂತರಗಳನ್ನು ಸೇರ್ಪಡೆ ಮಾಡಿದ್ದು, ಈ ಮೂಲಕ ಗ್ರಾಹಕರು ಉತ್ತಮ ಮತ್ತು ಸಕ್ರಿಯ ಜೀವನ ನಡೆಸಲು ನೆರವಾಗಲಿದೆ ಎಂದು ತಿಳಿಸಿದರು.

ಸಿಒಪಿಡಿಯಿಂದ ಬಳಲುತ್ತಿರುವ ರೋಗಿಗಳು ಆಮ್ಲಜನಕದ ಕೊರತೆಯಿಂದ ಬಳಲುತ್ತಿದ್ದಾರೆ. ಆಕ್ಸಿಜನ್ ಕಾನ್ಸಂಟ್ರೇಟರ್ ಗಳು ನೈಟ್ರೋಜನ್‌ನೊಂದಿಗೆ ಪರಿಸ್ಥಿತಿಯನ್ನು ನಿಭಾಯಿಸಲಿದೆ. ಅಲ್ಲದೇ, ಶೇ. 93 ರಷ್ಟು ಶುದ್ಧ ಆಮ್ಲಜನಕ ಪೂರೈಸಲಿದೆ ಎಂದರು.